ದಿನಾಂಕಃ 16-11-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೆ ಸವಾಲುಃ- ಪ್ರತಿವಾದಿ 2 ಮತ್ತು 3 ರ ಪರ ಶ್ರೀ ಎಫ ಎನ್ ಎನ್ ವಕೀಲರಿಂದ

ನನಗೆ ಪ್ರತಿವಾದಿ 1 ವಿನ ಕುಟುಂಬದ ಮಧ್ಯೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂದಿರುವುದು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಅವರ ಕುಟುಂಬದ ಹಿರಿಯರಿಂದ ಬಂದ ಆಸ್ತಿ ಆಗಿರುವುದು ಅಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು.

ದಾವಾ ಆಸ್ತಿಯ ಖರೀದಿ ಕರಾರುಪತ್ರ ಮಾಡಿಕೊಟ್ಟಿದ್ದಾನೆಂದು ಹೇಳುವ ದಾಖಲಾತಿಯ ಪೂರ್ವದಲ್ಲಿ ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂಬೈನ್ಡ ಉತಾರವನ್ನು ನೋಡಿರುವೆನು. ಈ ದಾಖಲಾತಿಯನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ ಅಂದರೆ ಸರಿ. ನಾನು ದಾವಾ ಆಸ್ತಿಯ ಸ್ಥಿತಿಗತಿಗಳ ಬಗ್ಗೆ ಹೋಗಿ ನೋಡಿಕೊಂಡು ಬಂದಿರುವೆನು. ದಾವಾ ಆಸ್ತಿಯು ಚೌಕ ಗಾತ್ರ ದಾಗಿರುವುದು ಈ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದು ಚೌಕಾಗಿರುವುದಿಲ್ಲ ಅಂದರೆ ಸರಿಯಲ್ಲ.

ಇಚ್ಚಂಗಿ ಗ್ರಾಮದ ಆಸ್ತಿ ರಿ ಸ ನಂ. 190 ರಲ್ಲಿ ಒಟ್ಟು ಎಷ್ಟು ಹಿಸ್ಸೆಗಳು ಇರುವವು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿ ನನ್ನ ಬಾಲ್ಯದ ಗೆಳೆಯನಾಗಿರುವುದಿಲ್ಲ ಅಂದರೆ ಸರಿ. 1 ನೇ ಪ್ರತಿವಾದಿಯ ಅಕ್ಕಪಕ್ಕದಲ್ಲಾಗಲೀ ಹಾಗೂ ಆ ಓಣಿಯಲ್ಲಾಗಲೀ ನನ್ನ ಹಾಗೂ ನನ್ನ ಸಂಬಂಧಿಗಳ ಮನೆಗಳು ಆಗಲೀ ಇರುವುದಿಲ್ಲ. ನಾನು ಈ ಮೊದಲು 1 ನೇ ಪ್ರತಿವಾದಿ ಮನೆಗೆ ಹೋಗಿ ಬಂದು ಮಾಡಿರುವುದಿಲ್ಲ. ಈ ವ್ಯವಹಾರದ ಸಮಯದಲ್ಲಿ ಹೋಗಿ ಬಂದು ಮಾಡಿರುವೆನು. ಈ ಕಾರಣದಿಂದ ನನಗೆ 1 ನೇ ಪ್ರತಿವಾದಿ ಬಹಳ ಪರಿಚಯ ಇರುವುದಿಲ್ಲ ಅಂದರೆ ಸರಿಯಲ್ಲ.

ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ ದೇವಪ್ಪ ಹನುಮಂತಪ್ಪ ಕೋಡ್ಷೆಪ್ಪನವರ ಜಮೀನು ಇರುವುದಿಲ್ಲ ಅಂದರೆ ಸರಿಯಲ್ಲ. ಈ ಜಮೀನು ಇದ್ದ ಬಗ್ಗೆ ನಾನು ಈ ದಾವೆಯಲ್ಲಿ

ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಅಂದರೆ ಸರಿ. ದಕ್ಷಿಣ ದಿಕ್ಕಿಗೆ ವಾದಪತ್ರದಲ್ಲಿ ತೋರಿಸಿರುವಂತಹ ಚಕ್ಕಬಂದಿಯ ಪ್ರಕಾರ ದೇವಪ್ಪನ ಆಸ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಈ ದಾವೆಯನ್ನು 1 ನೇ ಪ್ರತಿವಾದಿಯ ವಿರುದ್ಧ ಮಾತ್ರ ದಾಖಲು ಮಾಡಿರುವೆನು. ಪ್ರತಿವಾದಿ 2 ಮತ್ತು 3 ರವರ ವಿರುದ್ಧ ನನ್ನ ಯಾವುದೇ ಮಾಗಣಿ ಇರುವುದಿಲ್ಲ ಅಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿ 2 ಮತ್ತು 3 ರವರ ವಿರುದ್ಧ ನನ್ನ ಮಾಗಣಿ ಇದ್ದ ಬಗ್ಗೆ ಬರೆಸಿರುವುದಿಲ್ಲ. ನನಗೂ ಮತ್ತು 1 ನೇ ಪ್ರತಿವಾದಿಯ ಮದ್ಯೆ 15-16 ವರುಷಗಳಿಂದಲೂ ಪರಿಚಯ ಇರುವುದು.

1 ನೇ ಪ್ರತಿವಾದಿಗೆ ಯಾವ ರೀತಿಯಾದ ಹಣಕಾಸಿನ ಅಡಚಣೆ ಇದ್ದ ಬಗ್ಗೆ ನಾನು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಯಾವ ಯಾವ ಬ್ಯಾಂಕನಲ್ಲಿ ಎಷ್ಟು ಸಾಲ ಇತ್ತು ಎಂದು ನಾನು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ವಾದಪತ್ರದಲ್ಲಿ ಹೇಳಿರುವಂತೆ 1 ನೇ ಪ್ರತಿವಾದಿಗೆ ಯಾವುದೇ ಹಣಕಾಸಿನ ತೊಂದರೆ ಇರಲಿಲ್ಲ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನಗೆ ಬ್ಯಾಂಕನಿಂದ ಸಾಲವಿದ್ದು ಹಾಗೂ ಹಣಕಾಸಿನ ಅಡಚಣೆ ಇದ್ದು ಆ ಕಾರಣಕ್ಕಾಗಿ ತನ್ನ ಜಮೀನನ್ನು ಮಾರಾಟ ಮಾಡುವುದಾಗಿ ಎಂದು ಹೇಳಿರುವನು. ನನ್ನ ಮತ್ತು 1 ನೇ ಪ್ರತಿವಾದಿಯ ಮದ್ಯೆ ಮಾತುಕತೆ ಸಮಯದಲ್ಲಿ ನಾನು ಜಮೀನಿನ ಹೆಚ್ಚಿನ ಕಿಮ್ಮತ್ತನ್ನು ನಿಗದಿಪಡಿಸಿರುವೆನು. ದಾವಾ ಜಮೀನನ್ನು ಆ ಮಾತುಕತೆ ಸಮಯದಲ್ಲಿ ಯಾರು ಯಾರು ಎಷ್ಟು ಹಣದ ಮಾರುಕಟ್ಟೆ ಬೆಲೆಗೆ ಖರೀದಿ ಮಾಡಲು ಇಚ್ಚಿಸಿರುವರು ಎಂಬುದರ ಬಗ್ಗೆ ನನಗೆ ಹೇಳಲು ಬರುವುದಿಲ್ಲ. ನಾನು ದಾವಾ ಆಸ್ತಿಯನ್ನು ಎಲ್ಲರಕ್ಕಿಂತಲೂ ಹೆಚ್ಚಿನ ಮಾರುಕಟ್ಟೆ ಬೆಲೆಗೆ ಖರೀದಿ ಮಾಡಲು ಒಪ್ಪಿಕೊಂಡಿರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಈ ಮಾತುಕತೆಯು 1 ನೇ ಪ್ರತಿವಾದಿಯ ಇಚ್ಚಂಗಿ ಗ್ರಾಮದಲ್ಲಿ ಆತನ ಮನೆಯಲ್ಲಿ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಆಗಿರುವುದು. ನಾನು

ಇಚ್ಚಂಗಿ ಗ್ರಾಮಕ್ಕೆ ಮುಂಜಾನೆ ಬೆಳಗಿನ ಜಾವ 9 ಗಂಟೆಗೆ ನಾನೊಬ್ಬನೇ ಹೋಗಿದ್ದೆನು. ನಮ್ಮ ಗ್ರಾಮದಿಂದ ಬೇರೆ ಜನರನ್ನು ನನ್ನ ಜೊತೆ ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ ಅಂದರೆ ಸರಿ. ನನ್ನ ಮತ್ತು ಪ್ರತಿವಾದಿ ಮಧ್ಯೆ ವ್ಯವಹಾರ ಮುಗಿದ ನಂತರ ನಾನು ಹಣ ತರಿಸಿಕೊಂಡಿರುವೆನು. ನನ್ನ ಮಗ ನೀಡಿರುವನು. ಆ ಹಣವನ್ನು ಕಡಕೋಳ ಗ್ರಾಮದಿಂದ ಮದ್ಯಾಹ್ನ 12 ಗಂಟೆ ಸಮಯದಲ್ಲಿ ತಂದು ಕೊಟ್ಟಿರುವನು. ಆತ ರೂ. 6,56,375.00 ಹಣ ತೆಗೆದುಕೊಂಡಿರುವನು. ಈ ಹಣ ಜಮೀನಿಂದ ಬಂದ ಬೆಳೆಯ ಮಾರಾಟ ಮಾಡಿದ ಹಣ ಆಗಿರುವುದು. ಯಾವ ವರುಷದಲ್ಲಿ ಎಷ್ಟು ಮೌಲ್ಯದ ಬೆಳೆ ಮಾರಾಟ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಮಾರಾಟ ಮಾಡಿರುವ ಬೆಳೆಯ ಪಟ್ಟಿಯನ್ನು ಹಾಜರು ಮಾಡಿರುವುದಿಲ್ಲ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಅಂದರೆ ಸರಿ. ವಾದಪತ್ರದಲ್ಲಿ ಹೇಳಿರುವಂತೆ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಯಾವುದೇ ಖರೀದಿಕರಾರುಪತ್ರ ಆಗಿರುವುದಿಲ್ಲ ಸಂಚಾರ ಅಂತಾ ರೂ. 6,56,375.00 ಹಣವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ.

ಮುಂದಿನ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳ ಸವಣೂರ).

ಅಸಲು ದಾವಾ  ನಂ. 115/ 2017
ಪಿ ಡಬ್ಲು 1